ಇದರಿಂದ ಆನೆಗಳು ಬರುತ್ತವೆ. ಇದೆಲ್ಲಾ ಸಮಸ್ಯೆ ಇದೆ. ಇದಕ್ಕೆ ಒಂದು ಶಾಶ್ವತವಾದ ಪರಿಹಾರ ಕಾರ್ಯ ಮಾಡುವುದಕ್ಕೆ ತಮ್ಮಿಂದ ಸಾಧ್ಯವೇ ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಹೇಳತಕ್ಕಂಥಾದ್ದು ಬಹಳ ಸೂಕ್ತವಾದ ಸಲಹೆ. ಇದರಲ್ಲಿ ಮೂರು ವಿಚಾರ ಏನಿದೆ ಅದರಂತೆ ಕಂದಕ, ಕಲ್ಲುಗೋಡೆ, ತಂತಿಬೇಲಿ ಹಾಕುವುದರಿಂದಲೇ ಇದಕ್ಕೆ ಪರಿಹಾರ ದೊರೆಯುತ್ತದೆಂದು ನಾನು ನಂಬಿಲ್ಲ. ಮತ್ತೆ ನಾನು ಅಧಿಕಾರಿಗಳನ್ನು ಸಂಪರ್ಕ ಮಾಡಿ ತಿಳಿದುಕೊಂಡಹಾಗೆ, ಆನೆ ಈ ವರ್ಷ ಒಂದುಸಾರಿ ಎಲ್ಲಿ ಹೋಗಿ ತೆಂಗಿನಕಾಯಿ, ಭತ್ತ ಅಥವಾ ಬಾಳೆಕಾಯಿ ತಿನ್ನುತ್ತದೋ ಮುಂದಿನಸಾರಿಯೂ ಕೂಡ ಅಲ್ಲಿಗೇ ಹೋಗುತ್ತದೆ. ಅದೇ ರೈತ ಮತ್ತೆ ತೊಂದರೆಗೆ ಒಳಗಾಗುತ್ತಾನೆ ಎನ್ನುವ ವಿಚಾರ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ, ಈ ಮೂರು ಕಾರ್ಯಕ್ರಮಗಳನ್ನು ನಾವು ಏನು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ವನ್ಯಜೀವಿ ಕ್ಷೇತ್ರದಲ್ಲಿ ಕೆಲಸಮಾಡಿದಂಥ ತಜ್ಞರು ನಮ್ಮ ಇಲಾಖೆಯಲ್ಲಿದ್ದಾರೆ ಅವರನ್ನು, ರೈತರನ್ನು ಮತ್ತು ಮಾನ್ಯ ಸಿಂಧ್ಯರವರು ಹೇಳಿದಹಾಗೆ ಬೇರೆಯವರನ್ನೂ ಕರೆದು ಸಭೆ ಮಾಡಿ, ಅವರೆಲ್ಲ ಏನು ಸಲಹೆ ಕೊಡುತ್ತಾರೆಂಬುದನ್ನು ತಿಳಿದುಕೊಳ್ಳುತ್ತೇವೆ. ಈ ಬಗ್ಗೆ ದೂರು ಇರುವ ರೀತಿಯಲ್ಲಿ, ಅದಕ್ಕೆ ಬೇಕಾಗಿರತಕ್ಕ ಆಹಾರ ಅಲ್ಲಿಯೇ ಸಿಗುವ ರೀತಿಯಲ್ಲಿ ವ್ಯವಸ್ಥೆಯಾದರೆ ಬಹಳಮಟ್ಟಿಗೆ ಇಂತಹ ತೊಂದರೆಗಳು ಕಡಿಮೆಯಾಗುತ್ತದೆ. ಅದನ್ನು ಫಾರೆಸ್ಟ್‌ನಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಬೆಂಗಳೂರಿನ ನ್ಯಾಷನಲ್ ಪಾರ್ಕಿನ ಹತ್ತಿರದಲ್ಲಿ ಮಾಡುವಂಥಾದ್ದು ಕಷ್ಟ ಎಂಬುದಾಗಿ ನನ್ನ ವಿಚಾರವಿದೆ.

ಶ್ರೀ ವಿ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳುತ್ತಿದ್ದರು ಆನೆಗಳಿಗೆ ಬುದ್ಧಿ ಕಲಿಸುವುದಕ್ಕೆ ಆಗುವುದಿಲ್ಲ ಎಂದು ಹಾಗೆಯೇ ಮತ್ತೊಂದು ವಿಚಾರವನ್ನು ಅವರು ಪ್ರಸ್ತಾವ ಮಾಡಿದರು. ಯಾವುದಾದರೂ ಒಂದು ಪದಾರ್ಥವನ್ನು ತಿನ್ನುವ ರುಚಿಯನ್ನು ಆನೆ ಕಂಡುಕೊಂಡರೆ ಮತ್ತೆ ಅಲ್ಲಿಗೆ ಬಂದು ಹೋಗುತ್ತದೆ ಎಂದು. ಅದು ಒಂದು ದೊಡ್ಡ ಸಮಸ್ಯೆ ಇದೆ, ಅದರ ಬಗ್ಗೆ ಅಧಿಕಾರಿಗಳು ಯಾರೂ ಮಾತನಾಡುತ್ತಿಲ್ಲ. ಖೋಡೇಸ್‌ರವರ ಕೈಗಾರಿಕೆಗಳಿಂದ ವೇಸ್ಟೇಜ್ ಹೋಗುತ್ತಿದೆ, ಅದನ್ನು ಕುಡಿದು ಆನೆಗಳು ರೂಢಿ ಮಾಡಿಕೊಂಡು ಪ್ರತಿಸಾರಿ ಅಲ್ಲಿಗೆ ಬರುತ್ತವೆ. ಮತ್ತೆ ಅಲ್ಲಿಯ ಜನ ಆನೆಗಳನ್ನು ಓಡಿಸುತ್ತಲೇ ಇರುತ್ತಾರೆ. ಆನೆಗಳಿಗೆ ಮತ್ತೇರಿ ಬೆಂಗಳೂರು ಸಿಟಿ ಕಡೆ ಬರುತ್ತವೆ. ಇದರ ಬಗ್ಗೆ ನಾವು ಹೆಚ್ಚು ಗಮನ ಕೊಡಲಿಲ್ಲ ಅಂದರೆ ನಾವು ಏನು ಮಾಡಿದರೂ ಆನೆಗಳ ಕಾಟವನ್ನು ತಡೆಯುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ನಾವು ಯೋಚನೆ ಮಾಡಬೇಕು.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ಕುರಿತು

441 - ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ದೊಡ್ಡಬಳ್ಳಾಪುರ ತಾಲ್ಲೂಕಿನ ಹಾರೋಡಿ, ಮಳಿಕೋಟೆ, ಭಕ್ತರಹಳ್ಳಿ ಮತ್ತು ಕಾಡತಿಪ್ಪೂರು

ಗ್ರಾಮಗಳಲ್ಲಿ ಸರ್ಕಾರದ ಪಶುವೈದ್ಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, 2000-2001ನೇ ಸಾಲಿನಲ್ಲಿ ಕಾರ್ಯಗತಗೊಳ್ಳುವುದೇ?

2. *ಈ ದಿಶೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

1. ವಿಷಯವು ಪರಿಶೀಲನೆಯಲ್ಲಿದೆ.

2. ಅವಶ್ಯಕತೆಗನುಗುಣವಾಗಿ ಹಾಗೂ ಆಯವ್ಯಯ ಅವಕಾಶವನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರಗಳನ್ನು ಒದಗಿಸಿದ್ದಾರೆ; ಅವರ ಉತ್ತರದಲ್ಲಿ ಪರಿಶೀಲಿಸಲಾಗುತ್ತದೆ. ಅವಶ್ಯಕತೆ ಇದ್ದರೆ ಅಲ್ಲಿ ಆಸ್ಪತ್ರೆಗಳನ್ನು ತೆಗೆದುಕೊಳ್ಳಲಾಗುತ್ತದೆ. ಆಯವ್ಯಯದಲ್ಲಿ ಹಣದ ಅವಶ್ಯಕತೆ ನೋಡಿಕೊಂಡು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸುಮಾರು 1 ಲಕ್ಷ 50 ಸಾವಿರಕ್ಕೂ ಮೇಲ್ಪಟ್ಟು ಪಶುಗಳು ಇವೆ. ಎರಡು ವರ್ಷಗಳಿಂದ ಒಂದಾದರೂ ಪಶುವೈದ್ಯ ಆಸ್ಪತ್ರೆಯನ್ನು ಸರ್ಕಾರ ಮಂಜೂರು ಮಾಡಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆಯಿಂದ ಇನ್ನೊಂದು ಆಸ್ಪತ್ರೆಗೆ ಹೋಗಬೇಕಾದರೆ 30 ಕಿಲೋಮೀಟರ್ ದೂರ ಆಗುತ್ತದೆ. ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚು ಹಾಲು ಉತ್ಪತ್ತಿಯಾಗುವ ತಾಲ್ಲೂಕು ಎಂದರೆ ನಮ್ಮ ದೊಡ್ಡಬಳ್ಳಾಪುರ ತಾಲ್ಲೂಕು. ಅದರ ಅವಶ್ಯಕತೆ ಎಷ್ಟು ಇದೆ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಆಯವ್ಯಯ ಸುಧಾರಣೆ ಆಗುವುದು ಯಾವಾಗ? ಸರ್ಕಾರದಿಂದ ಪಶುವೈದ್ಯ ಆಸ್ಪತ್ರೆಗಳನ್ನು ಮಾಡಲು ಸಾಧ್ಯವಿಲ್ಲದಿದ್ದರೆ, ಖಾಸಗಿ ನರ್ಸಿಂಗ್ ಹೋಮ್ ತರಹ ಅಲ್ಲಿ ಆಸ್ಪತ್ರೆಗಳನ್ನು ಪ್ರಾರಂಭ ಮಾಡಲು ಅನುಮತಿ ಕೊಡುತ್ತಾರೆಯೇ?

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಬಹಳ ಪ್ರಾಮುಖ್ಯವಾಗಿ ಹೇಳಿದ್ದಾರೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಹಾರೋಡಿ ಮಳಿಕೋಟೆ, ಭಕ್ತರಹಳ್ಳಿ, ಕಾಡುತಿಪ್ಪೂರು ವಿಚಾರದಲ್ಲಿ ಹೇಳಿದ್ದಾರೆ. ಈಗ ಹಾಲಿ ಅಲ್ಲಿ ಕೃತಕ ಗರ್ಭಧಾರಣಾ ಉಪ ಕೇಂದ್ರಗಳಾಗಿವೆ. ಅಲ್ಲಿ ಆಸ್ಪತ್ರೆಗಳಾಗಬೇಕೆನ್ನುವುದು ತಮ್ಮ ಅಪೇಕ್ಷೆಯಾಗಿದೆ. ತಾವು ಹೇಳಿದ ಹಾಗೆ ಒಂದು ಲಕ್ಷ ಚಿಲ್ಲರೆ ಪಶುಗಳು ಅಲ್ಲ, ಎರಡು ಲಕ್ಷ 57 ಸಾವಿರ ನಾನೂರ ಹದಿನೈದು ಪಶುಗಳು ತಮ್ಮ ತಾಲ್ಲೂಕಿನಲ್ಲಿವೆ. ಸರ್ಕಾರ ಹೊಸದಾಗಿ ಮಂಜೂರು ಮಾಡುವಂತಹ ಪಟ್ಟಿಯಲ್ಲಿ ತಮ್ಮ ತಾಲ್ಲೂಕನ್ನು ಸೇರಿಸಿಕೊಂಡಿದ್ದೇವೆ. ಆಯವ್ಯಯ ಇಲ್ಲದೆ ಯಾವ ಕೆಲಸವನ್ನು ಮಾಡುವುದಕ್ಕೂ ಆಗುವುದಿಲ್ಲ. ನಾಳೆ ನೀವು ಇಲ್ಲಿ ಕುಳಿತುಕೊಂಡರೂ ಆಯವ್ಯಯ ಬೇಕೇ ಬೇಕು. ಆದ್ದರಿಂದ ಆಯವ್ಯಯ ನೋಡಿಕೊಂಡು ಮಾಡುತ್ತವೆಂದು ನಾನು ಹೇಳಿದ್ದು ಏಕೆಂದರೆ ದುಡ್ಡು ಎಷ್ಟು ಉಳಿದಿದೆ ಅದನ್ನು ನೋಡಿ ಮಾಡೋಣ ಅಂತ ಹೇಳಿದ್ದೇವೆ. ತಮಗೆ ಒಂದು ಸಂತೋಷದ ಸಂಗತಿ ಏನೆಂದರೆ, ಕರ್ನಾಟಕ ಸರ್ಕಾರ ಮೊನ್ನೆತಾನೆ ನಡೆದ ಸಚಿವ ಸಂಪುಟದಲ್ಲಿ 200 ಆಸ್ಪತ್ರೆಗಳನ್ನು ಪ್ರಾರಂಭ ಮಾಡಲು ಮಂಜೂರಾತಿಯನ್ನು ನೀಡಿದೆ. ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮಳಿಕೋಟೆ ಗ್ರಾಮ ಕೃತಕ ಗರ್ಭಧಾರಣೆ ಉಪಕೇಂದ್ರವಾಗಿದೆ. ಹಾರೋಡಿ

ಗ್ರಾಮದಲ್ಲಿ ನೂತನವಾಗಿ ಪ್ರಾಥಮಿಕ ಪಶು ಚಿಕಿತ್ಸಾಲಯ ಆಗಿದೆ. ಈ ಎರಡೂ ಕೇಂದ್ರಗಳನ್ನು ಆಸ್ಪತ್ರೆಗಳನ್ನಾಗಿ ಮಾಡುವುದಕ್ಕೆ ಸರ್ಕಾರ ಬಹಳ ವಿಶೇಷವಾಗಿ ಪರಿಗಣಿಸಿದೆ. ಆ ಪಟ್ಟಿಯನ್ನು ಬಿಡುಗಡೆ ಮಾಡುವಂತಹ ಸಂದರ್ಭದಲ್ಲಿ ನಿಮ್ಮ ಗ್ರಾಮಗಳಿಗೂ ಕೂಡ ಸಹಾಯವಾಗುವ ರೀತಿಯಲ್ಲಿ ಸರ್ಕಾರ ಸಹಕಾರವನ್ನು ಕೊಡುತ್ತದೆ. ಮತ್ತು ಖಾಸಗಿ ನರ್ಸಿಂಗ್ ಹೋಮ್ ತರಹ ಕನ್‌ವರ್ಟ್ ಮಾಡಿ ಆಸ್ಪತ್ರೆಗಳನ್ನು ಪ್ರಾರಂಭ ಮಾಡಲು ಅನುಮತಿ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ತಾವು ಈಗ 200 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಸರ್ಕಾರ ಮಂಜೂರಾತಿ ನೀಡಿದೆ, ನಾವು ಅದನ್ನು ಮಾಡುತ್ತೇವೆಂದು ಹೇಳಿದಿರಿ. ಮೇಲ್ದರ್ಜೆಗೆ ಏರಿಸಿದ ಮೇಲೆ ಅದಕ್ಕೆ ಸರಿಯಾಗಿ ಸಿಬ್ಬಂದಿಯನ್ನು ಹಾಕಬೇಕಲ್ಲವೇ? ನನ್ನ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿ ಅಲ್ಲಿಗೆ ಸಿಬ್ಬಂದಿಯನ್ನು ಹಾಕಲಿಲ್ಲ. ಎಲ್ಲರೂ ಬಂದು ಆ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿ ಅದ್ಧೂರಿಯಾಗಿ ಉದ್ಘಾಟನೆ ಮಾಡಿದ ದಿವಸ ಹಾಕಿದ ಬಾಗಿಲು ಇನ್ನೂ ತೆಗೆದಿಲ್ಲ. ಆದ್ದರಿಂದ ಮೇಲ್ದರ್ಜೆಗೆ ಏರಿಸಿದರೆ ಮಾತ್ರ ಅನುಕೂಲವಾಗುವುದಿಲ್ಲ. ಮೊದಲು ಸರಿಯಾದ ಸಿಬ್ಬಂದಿಯನ್ನು ಹಾಕಿ ಆಮೇಲೆ ಮೇಲ್ದರ್ಜೆಗೆ ಏರಿಸಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದ ಜೊತೆ ಅವರಿಗೆ ಕೆಟ್ಟ ಅನುಭವ ಇತ್ತು. ಈ ಸರ್ಕಾರದ ಜೊತೆ ಕೆಟ್ಟ ಅನುಭವ ಇಲ್ಲ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಪ್ರಶ್ನೆಗೆ ತಕ್ಕ ಉತ್ತರ ಕೊಡಬೇಕಾಗಿರುವಂಥಾದ್ದು ಇದೆ. ಇವತ್ತು ಇವರು ಬಂದು ಏನು ಮಾಡಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಅವರು ಪ್ರಶ್ನೆಗೆ ಸರಿಯಾದ ಉತ್ತರ ಕೊಡಲು ಆಗದಿದ್ದರೆ ತಾವು ಅವರಿಗೆ ಹೇಳಿಕೊಡಬೇಕಾಗುತ್ತದೆ. ಇವರಿಗೆ ಒಂದು ರೂಪಾಯಿ ಔಷಧಿ ಕೊಡುವುದಕ್ಕೆ ಯೋಗ್ಯತೆ ಇಲ್ಲ, ಇವರು ಹಿಂದಿನ ಸರ್ಕಾರದ ಬಗ್ಗೆ ಮಾತನಾಡುತ್ತಾರೆ. ಹೋದ ವರ್ಷ ಒಂದು ರೂಪಾಯಿ ಔಷಧಿ ಕೊಡಲಿಲ್ಲ. ಬಂದ ಹಣ ಎಲ್ಲಾ ಏನಾಯಿತು? ಎಲ್ಲಿಗೆ ಹೋಯಿತು? ಈ ಆಸ್ಪತ್ರೆಯನ್ನು ಇವರೇ ಮಂಜೂರು ಮಾಡಿರತಕ್ಕಂಥಾದ್ದು. ಇವರು ಹಿಂದಿನ ಸರ್ಕಾರದ ಬಗ್ಗೆ ಮಾತನಾಡುತ್ತಾರೆ. ಆ ಬಗ್ಗೆ ಮಾತನಾಡಲು ಇವರಿಗೆ ಏನು ಅಧಿಕಾರ ಇದೆ? ಮಾನ್ಯ ಅಧ್ಯಕ್ಷರೇ, ತಾವು ಅವರಿಗೆ ತಾಕೀತು ಮಾಡಬೇಕಾಗುತ್ತದೆ. ಪ್ರಶ್ನೆಗೆ ತಕ್ಕಂಥ ಉತ್ತರ ಮಾತ್ರ ಅವರು ಕೊಡಬೇಕು. ಭಾಷಣ ಮಾಡತಕ್ಕಂಥ ಜಾಗ ಇದಲ್ಲ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಶಿವಪ್ಪನವರು ಹೇಳಿದ್ದು ಏನೆಂದರೆ, ಹೋದ ಸಾರಿ ಎಲ್ಲಾ ಬಂದು ಬೋರ್ಡುಗಳನ್ನು ಉದ್ಘಾಟನೆ ಮಾಡಿ ಹೋದರು. ಆದರೆ ಡಾಕ್ಟರ್‌ಗಳನ್ನು ಕೊಡಲಿಲ್ಲ, ಈ ಸಾರಿ ಈ ರೀತಿ ಮಾಡಬೇಡಿ ಎಂದು ಅವರು ನನಗೆ ಸೂಕ್ಷ್ಮವಾಗಿ ಹೇಳಿದರು. ಅದಕ್ಕೆ ನಾನು ಉತ್ತರ ಹೇಳಿದೆ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : 4-5 ಜನ ಮಾನ್ಯ ಸದಸ್ಯರು ಒಟ್ಟಾಗಿ ಎದ್ದು ನಿಂತು ಮಾತನಾಡಿದಾಗ ನಾನು ಯಾವ ಸದಸ್ಯರಿಗೆ ಅನುಮತಿ ನೀಡಿರುತ್ತೇನೆಯೋ ಅವರ ಭಾಷಣವನ್ನು ಮಾತ್ರ ರೆಕಾರ್ಡ್ ಮಾಡಿ ಉಳಿದವರ ಭಾಷಣವನ್ನು ರೆಕಾರ್ಡ್ ಮಾಡಬೇಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಯಾವ ಯಾವ ಜಿಲ್ಲೆಯಲ್ಲಿ ಡಾಕ್ಟರ್ಸ್ ಹುದ್ದೆಗಳು ಖಾಲಿ ಇವೆಯೋ ಆ ಹುದ್ದೆಗಳನ್ನು ತುಂಬಲು ಸರ್ಕಾರ ಆಯಾ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರು ತಮ್ಮಲ್ಲಿ ಮನವರಿಕೆ ಮಾಡಿಕೊಂಡರು. ತಾವು ತಮಗೆ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಮತ್ತು ಬೇರೆ ಸಂದರ್ಭಗಳು ಬಂದಾಗ ಪ್ರಶ್ನೋತ್ತರಗಳನ್ನು ಒಂದು ಗಂಟೆಯಲ್ಲಿ ಮುಗಿಸುವುದಕ್ಕೆ ಸಹಕಾರ ಕೊಡಬೇಕು. ಅದನ್ನು ಜಾಸ್ತಿ ಉದ್ದ ಎಳೆಯಬಾರದು ಅಂತ ಹೇಳುತ್ತೀರಿ. ನಾವೆಲ್ಲ ಅದರ ಪ್ರಕಾರ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಮಂತ್ರಿಗಳು ಹಿಂದಿನ ಸರ್ಕಾರದ ಬಗ್ಗೆ ಹೇಳಿದರು. ಹಿಂದಿನ ಸರ್ಕಾರ ಮಾಡಿದ್ದನ್ನೇ ಚರ್ಚೆ ಮಾಡೋಣ. ಆದರೆ ಪ್ರಶ್ನೋತ್ತರ ವೇಳೆಯಲ್ಲಿ ಬೇಡ. ತಮ್ಮಲ್ಲಿ ನನ್ನ ಮನವರಿಕೆ ಏನೆಂದರೆ, ಮಾನ್ಯ ಮಂತ್ರಿಗಳಿಗೆ ತಾವು ಹೇಳಬೇಕಾಗುತ್ತದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮೊನ್ನೆ ದಿವಸ ಒಂದು ಪ್ರಶ್ನೆಗೆ 40 ನಿಮಿಷಗಳ ಕಾಲ ಉತ್ತರ ಕೊಟ್ಟರು. ಈ ರೀತಿಯಾದರೆ ಬೇಡಿಕೆಗಳಿಗೆ ಉತ್ತರ ಕೊಟ್ಟಂತೆ ಆಗುತ್ತದೆ. ಹಿಂದಿನ ಸರ್ಕಾರದಲ್ಲಿ ಏನೇನು ತಪ್ಪುಗಳು ಆಗಿವೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಬೇರೆ ಒಂದು ಸಮಯ ಸಂದರ್ಭವನ್ನು ಫಿಕ್ಸ್ ಮಾಡಿ. ತಾವು ಮಂತ್ರಿಗಳಿಗೆ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಅವರು ಸರಿಪಡಿಸಿಕೊಳ್ಳುತ್ತಾರೆ ಬಿಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ನಾವು ಅದನ್ನು ಸರಿ ಮಾಡಿಕೊಳ್ಳುತ್ತೇವೆ. ಆಯಾ ಜಿಲ್ಲೆಗಳಲ್ಲಿ ಡಾಕ್ಟರ್ಸ್‌ನ್ನು ನೇಮಕ ಮಾಡಿಕೊಳ್ಳುವುದಕ್ಕೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ಹೋಗಿದೆ. 200 ಆಸ್ಪತ್ರೆಗಳ ವಿಚಾರವನ್ನು ನಮ್ಮ ಮಾನ್ಯ ಸದಸ್ಯರಾದ ಶಿವಪ್ಪನವರು ಪ್ರಸ್ತಾಪ ಮಾಡಿದರು. ಅದಕ್ಕೂ ಕ್ಯಾಬಿನೆಟ್‌ನಿಂದ ಕ್ಲಿಯರ್ ಡೈರೆಕ್ಷನ್ಸ್ ಇದೆ. ಗ್ರಾಮೀಣ ಕೃಪಾಂಕದ ವಿಚಾರ ತೀರ್ಮಾನವಾದ ತಕ್ಷಣ ಅದರ ಬಗ್ಗೆ ಕೂಡ ತೀರ್ಮಾನ ತೆಗೆದುಕೊಳ್ಳಲು ಡೈರೆಕ್ಷನ್ಸ್ ಕ್ಯಾಬಿನೆಟ್‌ನಲ್ಲಿ ಕೊಟ್ಟಿದ್ದಾರೆ. ಹೋದ ಸಾರಿ ಆಸ್ಪತ್ರೆಗಳನ್ನು ಓಪನ್ ಮಾಡಿ ಡಾಕ್ಟರ್ಸ್ ಇಲ್ಲ, ಔಷಧಿ ಇಲ್ಲ, ಬ್ಯಾಂಡೇಜ್ ಇಲ್ಲ, ಮತ್ತೊಂದಿಲ್ಲ ಎಂದು ಏನು ಪ್ರಸ್ತಾಪ ಮಾಡಿದರು ಅದನ್ನು ಸುಧಾರಣೆ ಮಾಡುವುದಕ್ಕೆ ಸರ್ಕಾರ ಬದ್ದವಾಗಿದೆ. ಆ ವಿಷಯದಲ್ಲಿ ಏನೂ ತೊಂದರೆಯಾಗದಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಮಲೆನಾಡು ಪ್ರದೇಶಾಭಿವೃದ್ಧಿ ನೀಡಿದ ಅನುದಾನ

442 - ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶ ಅಭಿವೃದ್ಧಿ ಯೋಜನೆಗೆ ಈ ಸಾಲಿನಲ್ಲಿ ನೀಡಲಾಗಿರುವ ಅನುದಾನ ಎಷ್ಟು?